ನಾಗರಾಜ ಕೋರಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಬನ್ನಿಗನೂರು ಗ್ರಾಮದವರು. 'ಬುದ್ಧಗಿತ್ತಿಯ ನೆನಪು' ಮೊದಲ ಕವನ ಸಂಕಲನ, 'ತನುಬಿಂದಿಗೆ' ಮತ್ತು 'ಕಳವಳದ ದೀಗಿ' ಪ್ರಕಟಿತ ಕಥಾಸಂಕಲನಗಳು. 'ಉತ್ತರ ಕರ್ನಾಟಕದ ಕಾದಂಬರಿಗಳು: ಭಾಷಿಕ ಅಧ್ಯಯನ' ವಿಷಯದ ಮೇಲೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದಾರೆ.

ಕೊನಿಗೆ ಶೇಕ್ರಗ ತಲಿಚಿಟ್ ಹಿಡದಂಗಾಗಿ ಊರಾಗ ಓಣೋಣಿ, ಮನೆಮನೆ ತಿರಿಗಿ ಈ ದರಿದ್ರ ಮನ್ಯಾಗ ಖಾಲಿಕೂತು ತಲಿನ ಯಾಕ್ ಕೆಡಿಸಿಕೊಳ್ಳಬೇಕಂತ ನಾಕುದಿನ ಹೊರಗ ತಿರುಗಿ ಹಗುರ ಆಗಬೇಕಂತ ಹಂದಿ ನಾಗಪ್ಪನ ಜತಿಗೆ ಕೋಳಿಪಂದ್ಯ ಆಡಾಕ ನಾಗಪೂರ, ಶಿವಪೂರದ ಗುಡ್ಡಕ ಹೋಗಾಕ ಮುಂದಾದ. ಅಲ್ಲಿ ಹಂದಿ ನಾಗಪ್ಪನ ಹುಂಜ ಸುತ್ತ ನಾಕಳ್ಳಿಗೆ ಹೆಸ್ರುವಾಸಿಯಾಗಿತ್ತು. ಇದ್ರ ಭರವಸೆ ಮೇಲೆ ಬೆಟ್ಟಗುಡ್ಡ ನೋಡುತ್ತ ಒಂದಿಷ್ಟು ಪಂದ್ಯಾಡಿ ನಾಕು ರೂಪಾಯಿಯಾದ್ರು ದುಡುಕಬೇಕಂತ ಹೋದ. ಅದು ನಾಕುದಿನ ಮಾತ್ರ ನಡೀತು. ಅಲ್ಲಿ ಪೊಲೀಸ್ರ ಹಾವಳಿ ಹೆಚ್ಚಾಗಿ ನಿಂತ ನಿಂತಲ್ಲಿ, ಸಿಕ್‌ಸಿಕ್ಕಲ್ಲಿ ಪೊಲೀಸ್ರ ಕಡಿಂದ ಕುಂಡಿ, ಬಾಯಂಗ ಏಟುತಿಂದು ಕೋಳಿಪಂದ್ಯ ಆಡೋದು ಕೂಡ ನಿಂತೋಯ್ತು. ಮತ್ತೆ ಊರಾಗ ಒಂದಿಬ್ರು ಇಸ್ಪೀಟ್, ಮಟಕ ಆಡೋದನ್ನೆಲ್ಲ ಬಿಟ್ಟು ಹೊಸ್ತಾಗಿ ಮೊಲ್ದಬ್ಯಾಟಿ, ಮಿಕದಬ್ಯಾಟಿ ಆಡಾಕಂತ ಹೋಗುತ್ತಿದ್ರು. ಶೇಕ್ರ ಇದನ್ನು ಕೂಡ ಬಿಡಲಿಲ್ಲ. ಮನೇನ ನೆಟ್ಟಗ ಹೊಂದಲಾರ್ದ ಬ್ಯಾಟೆ ಆಡಾಕಂತ ಹೋದವರ ಜತಿ ಹಗಲೆಲ್ಲ ತಿರುಗತೊಡಗಿದ. ಬ್ಯಾಟಿಗೋದ್ರ ಅಲ್ಲಿ ಬ್ಯಾಟಿ ಸಿಗ್ತೈತಿ ಅನ್ನೋದು ಗ್ಯಾರೆಂಟಿದ್ದಿಲ್ಲ.

ಶೇಕ್ರ ಹಿಂಗ ಹಗಲೆಲ್ಲ ಪಂದ್ಯ, ಬ್ಯಾಟಿ ಆಡೋದಂತ ತಿರಗಿ ಇದ್ರಾಗನೇ ತೃಪ್ತಿ ಪಟ್ಟುಕೊಂಡು ಬರಿಗೈಲಿ ಮನಿಗೆ ಬಂದವನೇ ಪಿಂಜಿನ ಕಾಣುತ್ತಿದ್ದ. ಪಿಂಜಿ ಒಳ್ಳಿನ ಮುಂದ ಕೂತು ಮಸಾಲಿ ಹರಿತಾ ರಾಗಪ್ಪಗ ಎಂದಿನಂಗ ಆಮ್ಲೇಟ್ ಮಾಡಕೋತ ಕೂತಿರುತ್ತಿದ್ಲು. ಹೊರಗ ರಾಗಪ್ಪ ಜಂಗ್ ಹತ್ತಿದ ಮಂಚಕ ಬೆನ್ನಾಯಿಸಿ ಕುಂಬ್ಳಿಕಾಯಿಯಂತ ಹೊಟ್ಟೆಮೇಲೆ ಕೈ ಆಡಿಸುತ್ತ ಬೇಕಾದ್ದು ಮಾಡಿಸಿಕೊಂಡು ದಿನಾ ತಿನ್ನೋದು ರೂಢಿ ಮಾಡಿಕೊಂಡಿರುವುದಂಗ ಕಾಣುತ್ತಿತ್ತು. ಶೇಕ್ರ ಇದನ್ನೆಲ್ಲಾ ನೋಡಿದವನೇ, 'ಯಪ್ಪ ನನಗ ಇಲ್ಲಿ ಕೆಲ್ಸಇಲ್ಲ... ನನಗ ಮನ್ಯಾಗ, ಹೊಲ್ದಾಗ ಕೆಲ್ಸ ಮಾಡಾಕು ಬಿಡುವಲ್ಲಿ... ಎಲ್ಲ ನೀ ಹೇಳಿದಂಗ ಕೇಳಿ ನಾನೀಗ ಕೈಕಾಲು ಕಟ್ಟಿಕೊಂಡು ಊರಾಗ, ಮನ್ಯಾಗ ಖಾಲಿ ಕೂಡುವಂಗ ಆಗೈತಿ... ನನಗ ಏನಾದ್ರು ಹೊಲ್ದಾಗ, ಮನ್ಯಾಗ ಕೆಲ್ಸ ಮಾಡಾಕ ಬಿಡಪ್ಪ... ಊರಾಗ ಜನ ಕೆಲ್ಸ ಇಲ್ದವನಂಥ ಒಂಥರ ನೋಡ್ತಾರ... ಊರಾಗಿನ ಮಂದಿಜತೆ ಕೆಟ್ಟವ್ನು ಆಗ್ತೀನಿ... ಈಗಲೇ ನೋಡೋರ್ ಕಣ್ಣಿಗೆ ನಾನು ಹುಚ್ಚುನತರ ಆಗೀನಿ... ನಾವು ಮತ್ತೆ ಬೆಂಗಳೂರಿಗೆ ಹೋಗ್ತೀವಿ.. ಅಲ್ಲಿ ಹೆಂಗೋ ದುಡುದು ಬದುಕ್ತೀವಿ ನಮ್ಮನ್ನ ಬಿಟ್ಟುಬಿಡಪ್ಪ...' ಅಂತ ಶೇಕ್ರ ರಾಗಪ್ಪನ ಮುಂದ ಅಂಗಲಾಚಿದ. ರಾಗಪ್ಪ ಕಣ್ಣು ಕೆಂಪಮಾಡಿ ಗುರ್ ಅನ್ನತೊಡಗಿದ.

ಅದೇ ಹೊತ್ತಿಗೆ ಪಿಂಜಿ ಆಮ್ಲೇಟ್ ಮಾಡಿಕೊಂಡು ರಾಗಪ್ಪನ ಮುಂದಿಟ್ಟದ್ದೇ ತಡ. ಬಿಸಿರೊಟ್ಟಿ ಜತಿಗೆ ಆಮ್ಲೇಟ್ ತಿನಕಂತ ಶೇಕ್ರಗ ಏನೂ ಉತ್ತರ ನೀಡಲಿಲ್ಲ. ಅರ್ಧಹೊಟ್ಟೆ ತುಂಬಿದ ಮೇಲೆನೇ 'ಅಲ್ಲೋಗಿ ಹೆಂಡ್ರ ಸೀರೆಸೆರಗು ಹಿಡಕೊಂಡು ಓಡಾಡೋ ಮುಂಡೇಮಕ್ಕು... ಕೊನಿಗೆ ಪುಗಸಟ್ಟೆ ಸಾಯ್ತಾರ...' ಅಂತ ಮಂಚಕ ದಬಕ್ಕನ ಉಳ್ಳಿದ. ರಾಗಪ್ಪನ ಸಿಟ್ಟಿನ ಒಳಮಾತು ಶೇಕ್ರಗ ಏನಂಥ ಗೊತ್ತಾಗಲಿಲ್ಲ. ಎರಡುರೊಟ್ಟಿ ತಿನ್ನಾ ಬ್ಯಾಡಂತ ತಿಂದು, ಪಿಂಜಿಗೆ ಅಲ್ಲೇ ಹಾಸಂತ ಹೇಳಿ ಗಾಳಿ ತಗನಕ ಗುಡಿ ಮುಂದಿದ್ದ ಶಾಕಯ್ಯನ ಮನೆಕಡೆ ಬಂದ. ಶಾಕಯ್ಯನ ಮನೆಬಾಗ್ಲು ತೆರೆದಿರಲಿಲ್ಲ. ಅಷ್ಟತ್ತಿಗೆ ಗುಡಿಕಟ್ಟೆಗೆ ಹೊಸದಾಗಿ ನಡೆದ ಐಪಿಲ್ ಮ್ಯಾಚ್ ಒಂದು ಸೈಡ್ ಆಗಿತ್ತೇನು. ಗೆಲ್ಲೋ ಮ್ಯಾಚ್‌ಕಡೆ ದುಡ್ಡು ಕಟ್ಟಿದವರು ಇಸ್ಪೀಟ್ ಆಡುತ್ತ ಗುಡಿಕಟ್ಟೆಗೆ